# ಬಂಧನಗಳಿಂದ ದೂರವಾಗುತ್ತ ಸ್ವಾವಲಂಬನೆಯ ದಾರಿಯಲ್ಲಿ...

ನಾಲ್ಕು ತಿಂಗಳು ಪ್ರತ್ಯೇಕ ವಾಸ, ಒಂದು ತಿಂಗಳಿನಿಂದ ಎರಡು ತಿಂಗಳು ಅರ್ಜಿಯನ್ನು ಮರಳಿ ಪಡೆಯುವ ನಿರೀಕ್ಷೆ ಹಾಗೂ ನ್ಯಾಯಾಲಯದ ಕಾರ್ಯಕಲಾಪಗಳಿಗೆ ಹಿಡಿಯುವ ಕೆಲವು ತಿಂಗಳುಗಳು – ಒಟ್ಟಿನಲ್ಲಿ ಒಂದು ವರ್ಷದಲ್ಲಿ ಪತಿ–ಪತ್ನಿ ಪರಸ್ಪರರಿಂದ ಮುಕ್ತರಾಗಿ ತಮ್ಮ ಜೀವನವನ್ನು ತಮ್ಮಿಷ್ಟದಂತೆ ಸಾಗಿಸಲು ಯೋಗ್ಯರಾಗುತ್ತಾರೆ. ನ್ಯಾಯಾಲಯ ಮಾರ್ಕೋಗೆ, 'ನ್ಯಾಯಾಲಯ ವಿಚ್ಛೇದನದ ನಿರ್ಣಯವನ್ನು ಕಾಯ್ದಿರಿಸುತ್ತದೆ, ಅಲ್ಲಿಯವರೆಗೆ ಮಾರ್ಕೋ ಬೇರೆಡೆಯಲ್ಲಿ ವಾಸಿಸಲು ವ್ಯವಸ್ಥೆಯನ್ನು ಮಾಡಿಕೊಳ್ಳುವುದು, ಪತ್ನಿಯ ಅನುಮತಿಯಿಲ್ಲದೆ ಮನೆಯೊಳಗೆ ಕಾಲಿಡಬಾರದು' ಎಂದು ಆದೇಶಿಸಿತು.

ಮಾರ್ಕೋ ಅವಮಾನಿತನಾದ. ಈ ಮನೆ ನನ್ನ ಸಂಪಾದನೆಯಿಂದ ಖರೀದಿಸಿದ್ದೇನೆ, ಮನೆಯ ಖರ್ಚನ್ನು ನಾನು ಭರಿಸುತ್ತೇನೆ, ನಾನೆಲ್ಲೂ ಹೋಗುವುದಿಲ್ಲ, ಈ ಮನೆಯಿಂದ ನೀನೇ ಹೊರಗೆ ಹೋಗಬೇಕು ಎಂದು ವಾದಿಸಿದ. ನನ್ನ ವಕೀಲರಾದ ಸೋಫಿಯಾ ಲಾಂಗೆಯವರು ಅವನಿಗೆ, ನೀವು ನೌಕರಿಯನ್ನು ಮಾಡುತ್ತಿದ್ದರೆ, ಸಂಪಾದನೆಯನ್ನು ಮಾಡುತ್ತಿದ್ದರೆ, ಮನೆಯನ್ನು ಖರೀದಿಸಿದ್ದರೆ, ನಿಮ್ಮ ಪತ್ನಿ ಸಹ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಪುತ್ರನಿಗೆ ಜನ್ಮ ಕೊಟ್ಟು, ಮನೆಯನ್ನು ನೋಡಿಕೊಳ್ಳುತ್ತಿದ್ದಾರೆ, ಪುತ್ರನನ್ನು ಪಾಲಿಸುತ್ತಿದ್ದಾರೆ. ಪುತ್ರ ಇನ್ನೂ ಚಿಕ್ಕವನು, ಅವನು ತಾಯಿಯ ಜೊತೆಯಲ್ಲಿಯೇ ಬೆಳೆಯಬೇಕು, ಅದಕ್ಕಾಗಿ ತಾಯಿಗೆ ಮನೆ ಬೇಕು. ತಂದೆ ತಮ್ಮ ಲಗ್ಗೇಜುಗಳೊಂದಿಗೆ ಮನೆಯಿಂದ ಹೊರಗೆ ಹೋಗಬೇಕು; ನ್ಯಾಯಾಲಯ ತೀರ್ಮಾನ ಕೊಡುವವರೆಗೆ ತಾಯಿ ಮಗನೊಂದಿಗಿರಬೇಕು ಎಂದು ತಿಳಿ ಹೇಳಿದರು.

ಮಾರ್ಕೋ ಮನೆಯಿಂದ ತನ್ನ ಲಗ್ಗೇಜುಗಳೊಂದಿಗೆ ಹೊರ ಹೋಗಬೇಕಾಯಿತು. ಅವನು ಹೋದ, ಆದರೆ ತನಗೆ ಬೇಕೆನಿಸಿದಾಗ ಮನೆಯೊಳಗೆ ಬಂದು ವಕ್ಕರಿಸುತ್ತಿದ್ದ. ಮನೆಯ ಬೀಗದ ಕೈಯೊಂದು ಅವನ ಬಳಿ ಇತ್ತು. ಇಡೀ ಮನೆಯಲ್ಲಿ ಸುತ್ತುಹಾಕುತ್ತಿದ್ದ, ಮನೆಯ ವಸ್ತುಗಳನ್ನು ಗಮನಿಸುತ್ತಿದ್ದ. ನಾನು ಬಯಸಿದ್ದರೆ, ಪೊಲೀಸರನ್ನು ಕರೆಸಿ ಅವನನ್ನು ಮನೆಯಿಂದ ಹೊರಹಾಕಬಹುದಿತ್ತು. ಆದರೆ ಹೀಗೆ ಮಾಡುತ್ತಿರಲಲ್ಲ. ಅವನು ನನ್ನ ಮಗನ ತಂದೆ ಎಂಬುದನ್ನು ನಾನು ಸದಾ ಗಮನದಲ್ಲಿಟ್ಟುಕೊಂಡಿದ್ದೆ. ನಾನು ವಿಚ್ಛೇದನದ ನಂತರವೂ ನನ್ನ ಮಗನ ತಂದೆಯೊಂದಿಗೆ ಆರೋಗ್ಯಕರ ಸಂಬಂಧವನ್ನಿಟ್ಟುಕೊಳ್ಳಲು ಬಯಸುತ್ತಿದ್ದೆ.

ಆದರೆ ಅದೊಂದು ದಿನ ನಾನು ಪೊಲೀಸರನ್ನು ಕರೆಸಲೇಬೇಕಾಯಿತು. ಮನಸ್ಸಿಗೆ ತುಂಬಾ ದುಃಖವಾಗಿತ್ತು. ನನ್ನ ಮನಸ್ಸಿನ ದುಃಖವನ್ನು ಯಾರೊಂದಿಗೆ ಹೇಳಿಕೊಳ್ಳಲಿ? ನಾನು ಫಿಲಿಪ್ ಅವರಿಗೆ ಫೋನ್ ಮಾಡಿದೆ. ಲಾರಾರ ನಿಧನದ ನಂತರ ಅವರಿಗೆ ಮೂರ್ನಾಲ್ಕು ಬಾರಿ ಫೋನ್ ಮಾಡಿ ನಮ್ಮ ಮನೆಗೆ ಊಟಕ್ಕೆ ಬರಲು ಆಹ್ವಾನಿಸಿದ್ದೆ. ಅವರಿಂದಲೇ ನನಗೆ ಲಾರ್ಸ್ ಬಗ್ಗೆ ವಿಷಯಗಳು ತಿಳಿಯುತ್ತಿದ್ದವು.

